ಅ) ವೃತ್ತಿ ನಾಟಕ ಪ್ರದರ್ಶನದ ಬಗ್ಗೆ ಇರುವ ನಿಯಮಗಳೇನು ?

ಆ) ಕರ್ನಾಟಕ ನಾಟಕ ಅಕಾಡೆಮಿಯವರು ರ್ಗಟಿಸಿರ ಪೋಲೀಸ್ ನಿಯಮಾವಳಿಗೆ ತಿದ್ದುಪಡಿಗಳನ್ನು ಕಳುಹಿಸಿಕೊಟ್ಟಿರುತ್ತಾರೆಯೇ ?

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮವೇನು ?

ಈ) ವೃತ್ತಿ ನಾಟಕಗಳ ಬೆಳವಣಿಗೆಗೆ ಸರ್ಕಾರದವರು ಯೋಜನೆಯನ್ನೇನಾದರೂ ರೂಪಿಸಿದ್ದಾರೆಯೇ ?

ಶ್ರೀ ಜೇ.ಪರಾಜ ಆಳ್ವ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಸಚಿವರು).—

ಅ) ವೃತ್ತಿ ನಾಟಕ ಪ್ರದರ್ಶನದ ಬಗ್ಗೆ ಪ್ರತ್ಯೇಕ ನಿಯಮಗಳು ಈ ಇಲಾಖೆಯಲ್ಲಿ ಇರುವುದಿಲ್ಲ.

ಆ) ಕಳುಹಿಸಿ ಕೊಟ್ಟಿರುತ್ತಾರೆ.

ಇ) ಸದರಿ ತಿದ್ದುಪಡಿಗಳನ್ನು ಒಳಾಡಳಿತ ಇಲಾಖೆಗೆ ಕಳುಹಿಸಿದ್ದು, ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ) ರೂಪಿಸಲಾಗಿದೆ.

ರಾಜ್ಯದ ಯಾವುದಾದರೂ ಆಸ್ಪತ್ರೆಯಲ್ಲಿ ಏಡ್ಸ್ ರೋಗದ ರೋಗಿಗಳ ದಾಖಲಾತಿ ಕುರಿತು

೧೬೭೯. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಯಾವುದಾದರೂ ಆಸ್ಪತ್ರೆಯಲ್ಲಿ ಏಡ್ಸ್ ರೋಗದ ರೋಗಿಗಳು ದಾಖಲಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಏಡ್ಸ್‌ರೋಗ ರಾಜ್ಯದಲ್ಲೆಲ್ಲಾ ಹರಡದ ಹಾಗೆ ಸರ್ಕಾರದವರು ಪಲಂಜಾಗ್ರತೆಯ ಕ್ರಮವನ್ನೇನಾದರೂ ಕೈಗೊಂಡಿದ್ದಾರೆಯೆ ?

ಇ) ಹಾಗಿದ್ದಲ್ಲಿ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದ ಪೋಲೀಸ್ ಇಲಾಖೆ ಪತ್ರಿಕೆಗಳಿಗೆ ಸುದ್ದಿ ಬಿಡುಗಡೆ ಮಾಡುವಲ್ಲಿನ ಕೆಲವು ನಿಬಂಧನೆಗಳು.

೧೦೫೨. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಪೋಲೀಸ್ ಇಲಾಖೆ ಸುದ್ದಿಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುವಲ್ಲಿ ಏನಾದರೂ ನಿರ್ದಿಷ್ಟ ನಿಬಂಧನೆಗಳನ್ನು ಇಲಾಖೆಗೆ ತಿಳಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಹೊಸದುರ್ಗ ಪೋಲೀಸ್ ಸರ್ಕಲ್-ಇನ್ಸ್‌ಪೆಕ್ಟರ್ ಅವರು ನೇರವಾಗಿ ತಾವೇ ಇಲಾಖೆಯ ವರದಿಗಳನ್ನು ಪತ್ರಿಕೆಗಳಿಗೆ ಹೇಳಿಕೆ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?